ಕನ್ನಡ ಜಿಲ್ಲೆಯಲ್ಲಿ ಇನ್ನೊಂದು ವಿಭಾಗವನ್ನು ಉಡುಪಿ ಇಲ್ಲವೆ ಕಮ್ಮರದಲ್ಲಿ ಪ್ರಾರಂಭ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ:– ಸನ್ಮಾನ್ಯ ಅಧ್ಯಕ್ಷರೆ, ಈ ಕಮರ್ಶಿಯಲ್ ಪ್ರಾಕ್ಟೀಸ್ ಕೋರ್ಸ್ ಮತ್ತು ಈ ಡಿಪ್ಲೋಮಾ ಕೋರ್ಸ್ ಇವತ್ತು ಸ್ವಲ್ಪ ಪಾಪ್ಯುಲರ್ ಆಗಿದೆ. This is employment oriented. ಮಾನ್ಯ ಸದಸ್ಯರು ಹೇಳಿದಂತೆ ಈ ಕೋರ್ಸ್‌ಗಳು ಕೆಲವು ಸಾರಿ ಬದಲಾವಣೆಯಾಗುತ್ತದೆ. ಕೆಲವು ಸಲ civilly ಪಾಪ್ಯೂಲರ್ ಆಗುತ್ತದೆ, ಮತ್ತೆ ಕೆಲವು ಸಲ mechanically ಪಾಪ್ಯೂಲರ್ ಆಗುತ್ತದೆ. ಇದು ಬಹಳವಾಗಿ ಮಹಿಳಾ ಪಾಲಿಟೆಕ್ನಿಕ್‌ಗಳಲ್ಲಿ ಪಾಪ್ಯೂಲರ್ ಆಗಿದೆ. ನಮ್ಮಲ್ಲಿ ಈಗ ಸರ್ಕಾರದ ವತಿಯಿಂದ 6 ಮಹಿಳಾ ಪಾಲಿಟೆಕ್ನಿಕ್ ಇವೆ. ಈ ಎಲ್ಲಾ ಆರು ಕಾಲೇಜುಗಳಲ್ಲಿ ಈ ಕೋರ್ಸ್ ಇದೆ. ಇನ್ನೂ ಹೆಚ್ಚು ಸಂಖ್ಯೆ ಕೊಡಬೇಕೆಂದರೆ ಯೋಚನೆ ಮಾಡಬಹುದು. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಇದನ್ನು ಹೆಚ್ಚು ಮಾಡಬೇಕೆಂದು ತಿಳಿಸಿದ್ದೇವೆ. ಅವರ ಸಹಾಯವನ್ನು ಪಡೆದು ಪ್ರಾರಂಭ ಮಾಡುತ್ತೇವೆ.

ಶ್ರೀ ಬಸವರಾಜ್:– ಮಂಗಳೂರಿನಲ್ಲಿ ಇದರ ಸಂಖ್ಯೆಯನ್ನು ಜಾಸ್ತಿ ಮಾಡಬೇಕೆಂದು ಕೇಳಿದ್ದೆ.

ಶ್ರೀ ಎಸ್. ಎಂ. ಯಾಹ್ಯಾ:– ಅದನ್ನು ವಿಚಾರ ಮಾಡುತ್ತೇವೆ.

ಚನ್ನರಾಯಪಟ್ಟಣದಲ್ಲಿ ಸರ್ಕಾರಿ ಪ್ರೌಢಶಾಲೆಗೆ ಕಾಂಪೌಂಡ್ ಗೋಡೆಯ ನಿರ್ಮಾಣ

304 (1803): ಡಾ: ಎನ್.ಬಿ. ನಂಜಪ್ಪ, (ಶ್ರವಣ ಬೆಳಗೊಳ):–

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚನ್ನರಾಯಪಟ್ಟಣ ಟೌನ್‌ನ ಸಂತೆ ಮೈದಾನದಲ್ಲಿ ಒಂದು ಸರ್ಕಾರಿ ಪ್ರೌಢಶಾಲೆಯಿದ್ದು ಇದರ ಸ್ವಂತ ಕಟ್ಟಡವಿದ್ದು, ಇದರ ಮುಂಭಾಗದಲ್ಲಿ ಸಂತೆ ನಡೆಯುತ್ತಿದ್ದು, ಇದರ ಗಲಾಟೆಯಿಂದ ಮಕ್ಕಳಿಗೆ ತೊಂದರೆಯಾಗಿರುವುದರಿಂದ ಈ ಕಟ್ಟಡದ ಸುತ್ತ ಕಾಂಪೌಂಡ್ ಗೋಡೆಯ ಅವಶ್ಯಕತೆ ಇರುವುದು, ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ ಇದನ್ನು ತ್ವರಿತವಾಗಿ ಮಾಡಿ ಕೊಡಲು ಕ್ರಮ ತೆಗೆದುಕೊಳ್ಳಲಾಗುವುದೆ;

ಇ) ಚನ್ನರಾಯಪಟ್ಟಣ ಟೌನ್ ಮಾಧ್ಯಮಿಕ ಶಾಲೆಯ ಕಟ್ಟಡವು ಹಳೆಯದಾಗಿದ್ದು, ಮರಮುಟ್ಟು ಹಾಳಾಗಿ ರಿಪೇರಿಯಾಗದೆ ಮಳೆಗಾಲದಲ್ಲಿ ಮಕ್ಕಳು ಕುಳಿತುಕೊಳ್ಳಲೂ ಭಯವಾಗುವ ಸ್ಥಿತಿಯಲ್ಲಿರುವುದು ನಿಜವೇ;

ಈ) ಹಾಗಿದ್ದಲ್ಲಿ ಜಿಲ್ಲಾಪರಿಷತ್‌ಗೆ ಅನೇಕ ಬಾರಿ ತಿಳಿಸಿ ಈವರೆಗೆ ಯಾವ ಪ್ರಯೋಜನವಾಗದೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದರೆ ಯಾವಾಗ ದುರಸ್ತಿ ಮಾಡಿಸಿಕೊಡಲಾಗುವುದು.

ಡಾ: ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಬಂದಿದೆ.

ಆ) ಈ ಶಾಲೆಗೆ ಕಾಂಪಾಂಡ್ ಗೋಡೆ ನಿರ್ಮಿಸುವ ಸಲುವಾಗಿ ಈಗಾಗಲೇ ಜಿಲ್ಲಾಪರಿಷತ್

ಇಂಜಿನಿಯರಿಂಗ್ ಉಪವಿಭಾಗ, ಚನ್ನರಾಯಪಟ್ಟಣ ಇವರು ಅಂದಾಜು ಪಟ್ಟಿ, ನೀಲಿ ನಕ್ಷೆ ತಯಾರಿಸಿದ್ದು, ಜಿಲ್ಲಾಪರಿಷತ್ ಹಾಸನ ಇವರ ಮಂಜೂರಾತಿಗಾಗಿ ದಿನಾಂಕ: 22-8-92ರಲ್ಲಿ ಸಲ್ಲಿಸಿರುವರು. ಜಿಲ್ಲಾಪರಿಷತ್‌ನವರೊಂದಿಗೆ, ಜಿಲ್ಲಾಧಿಕಾರಿಗಳೊಂದಿಗೆ ವ್ಯವಹರಿಸಿ, ಶಾಲೆಗೆ ಕಾಂಪೌಂಡ್ ನಿರ್ಮಿಸುವಲ್ಲಿ ಕ್ರಮ ಕೈಗೊಳ್ಳಲಾಗುವುದು.

ಇ) ಹೌದು

ಈ) ಗಮನಕ್ಕೆ ಬಂದಿದೆ.

ಉ) ಈ ಶಾಲೆಯು ಪಟ್ಟಣ ಪ್ರದೇಶದಲ್ಲಿ ಬರುತ್ತಿರುವುದರಿಂದ ಕೂಡಲೇ ಜಿಲ್ಲಾಧಿಕಾರಿಗಳು ಹಾಸನ ಇವರೊಂದಿಗೆ ವ್ಯವಹರಿಸಿ ಸದರಿ ಶಾಲಾ ಕಟ್ಟಡದ ದುರಸ್ತಿ ಪಡಿಸುವ ಬಗ್ಗೆ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು.

ಡಾ: ಎನ್. ಬಿ. ನಂಜಪ್ಪ:- ಸನ್ಮಾನ್ಯ ಅಧ್ಯಕ್ಷರೆ, ಚನ್ನರಾಯಪಟ್ಟಣದ ಸಂತೆ ಮೈದಾನದಲ್ಲಿ ಒಂದು ಹೈಸ್ಕೂಲ್ ಬಹಳ ದಿನಗಳಿಂದ ಇದೆ, ಇದು ಸಂತೆ ಮೈದಾನಕ್ಕೆ ಸೇರಿಕೊಂಡಿರುವುದರಿಂದ, ಅದಲ್ಲದೆ ಇದಕ್ಕೆ ಕಾಂಪೌಂಡ್ ಇಲ್ಲದೇ ಇರುವುದರಿಂದ ಅಲ್ಲಿ ಸಂತೆ ನಡೆಯುವುದರಿಂದ ಗಲಾಟೆಯಾಗಿ ಮಕ್ಕಳಿಗೆ ತುಂಬಾ ತೊಂದರೆಯಾಗುತ್ತಿದೆ. ಇದರ ಬಗ್ಗೆ ನಾನು ಅನೇಕ ಸಾರಿ ಸರ್ಕಾರಕ್ಕೆ, ಜಿಲ್ಲಾ ಪರಿಷತ್ತಿಗೆ ಬರೆದರೂ ಕೂಡ ಇದುವರೆಗೆ ಆ ಕಾಂಪೌಂಡನ್ನು ಹಾಕಿಸಿರುವುದಿಲ್ಲ. ಆ ಸಂತೆಯ ಗಲಾಟೆಯಿಂದ ಮಕ್ಕಳಿಗೆ ತೊಂದರೆಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ? ಯಾವಾಗ ಆ ಶಾಲೆಗೆ ಕಾಂಪೌಂಡನ್ನು ಹಾಕಿಸುತ್ತೀರಿ ?

ಎರಡನೆಯದಾಗಿ ಅಲ್ಲಿ ಒಂದು ಮಾಧ್ಯಮಿಕ ಶಾಲೆ ಇದೆ, ಇದು ಸುಮಾರು 100 ವರ್ಷದ ಹಳೆಯ ಕಟ್ಟಡದಲ್ಲಿದೆ. ಆ ಕಟ್ಟಡ ಚೆನ್ನಾಗಿದೆ, ಆದರೆ ಅದಕ್ಕೆ ರಿಪೇರಿ ಇಲ್ಲದೆ ಅದು ಸಂಪೂರ್ಣವಾಗಿ ನಶಿಸಿಹೋಗುವ ಮಟ್ಟದಲ್ಲಿದ್ದು ಮಕ್ಕಳು ಮಳೆಗಾಲದಲ್ಲಿ ಅದರೊಳಗೆ ಕುಳಿತುಕೊಳ್ಳಲು ಆಗುವುದಿಲ್ಲ, ಇದರ ಬಗ್ಗೆಯೂ ಕೂಡ ಅನೇಕ ಸಲ ಸರ್ಕಾರಕ್ಕೆ ತಿಳಿಸಿದ್ದರೂ, ಈ ಕಟ್ಟಡಕ್ಕೆ ರಿಪೇರಿಯಾಗಲಿ, ವಾರ್ಷಿಕ ರಿಪೇರಿಯಾಗಲಿ ಮಾಡಿರುವುದಿಲ್ಲ, ದಯವಿಟ್ಟು ಅದನ್ನು ಯಾವಾಗ ಮಾಡುತ್ತೀರಿ ?

ಡಾ: ಹೆಚ್. ಡಿ. ಲಮಾಣಿ: ಸನ್ಮಾನ್ಯ ಅಧ್ಯಕ್ಷರೆ, ಆ ಶಾಲೆಯು ಸಂತೇ ಮೈದಾನದ ಹತ್ತಿರವಿರುವುದು ನಿಜ. ಆ ಶಾಲೆಯನ್ನು ಅಲ್ಲಿ ಕಟ್ಟಿದ್ದೆ ಮೊದಲನೆ ಅಭಾಸವಾದ ವಿಚಾರ. ಶಾಲೆಯ ಎದುರಿಗೇ ಸಂತೆ ನಡೆಯುತ್ತದೆ. ಆದುದರಿಂದ ಮಕ್ಕಳಿಗೆ ಮತ್ತು ಪಾಠ ಹೇಳುವ ಶಿಕ್ಷಕರಿಗೆ ತೊಂದರೆಯಾಗುತ್ತದೆ. ಆದುದರಿಂದ ಸದರಿ ಶಾಲೆಗೆ ಸುತ್ತಲೂ ಕಾಂಪೌಂಡ್ ಕಟ್ಟಲು ಈಗಾಗಲೇ ಕಾರ್ಯಕ್ರಮ ಹಾಕಿದ್ದೇವೆ. ಅದರ ನೀಲಿ ನಕ್ಷೆಯನ್ನೂ ಕೂಡ ತಯಾರಿಸಿ, ಅದರ ಅಂದಾಜು ಪಟ್ಟಿಯನ್ನು ತಯಾರಿಸಿ ಮಂಜೂರಾತಿಗಾಗಿ 22-8-92ರಲ್ಲಿ ಕಳಿಸಿಕೊಟ್ಟಿದ್ದೇವೆ. ಇದಕ್ಕೆ ಮಂಜೂರಾತಿ ಬಂದ ಕೂಡಲೆ ಆ ಕಾಂಪೌಂಡ್‌ನ ಗೋಡೆಯನ್ನು ಕಟ್ಟಲು ಜಿಲ್ಲಾಪರಿಷತ್ತಿಗೆ ನಿರ್ದೇಶನವನ್ನು ಕೊಡುತ್ತೇವೆ. ಅದನ್ನು ಆದಷ್ಟು ಬೇಗ ಕಟ್ಟಿಕೊಡತಕ್ಕ ವ್ಯವಸ್ಥೆ ಮಾಡುತ್ತೇವೆ.

ಇನ್ನು ಎರಡನೆಯದಾಗಿ ಬೇರೆ ಶಾಲೆಯೊಂದು ಸೇರುತ್ತಿದೆ, ಅದರ ರಿಪೇರಿ ಅವಶ್ಯಕತೆ ಇದೆ ಎನ್ನುವ ಮಾತನ್ನು ಹೇಳಿದ್ದಾರೆ. ಆ ಶಾಲೆಯನ್ನು ರಿಪೇರಿ ಮಾಡಿಸಲು ಹಣವನ್ನು ಬಿಡುಗಡೆ ಮಾಡಲು ನಮ್ಮ ಅಧಿಕಾರಿಗಳಿಗೆ ಹೇಳಿ, ರಿಪೇರಿ ಮಾಡಿಸಿ ಕೊಡುತ್ತೇನೆ.

ಸೀಗೆಹಳ್ಳಿ ಅರಣ್ಯ ವಲಯದಲ್ಲಿ ನೀಲಗಿರಿ ಮರದ ಕಾನೂನುಬಾಹಿರ ಮಾರಾಟ

305 (1799): ಶ್ರೀ ಎಸ್. ರುದ್ರಪ್ಪ (ತುರುವೇಕೆರೆ):-